

ಸಮುದ್ರದ ದಂಡೆಯಲ್ಲಿ ಶಾಂತರಸ– ಲಕ್ಷ್ಮಿದೇವಿ ದಂಪತಿ

'ಭಾರತ ಭಾಗ್ಯವಿಧಾತ' ಕಥೆಯನ್ನು ಓದಿ, ಇದು ಕನ್ನಡ ಕಥಾ ಜಗತ್ತಿನ ಹೊಸ ಪ್ಯಾಟರ್ನ್ ಎಂದು ನನಗೆ ಉತ್ತೇಜಿಸಿದ್ದರು. ನಾನು ಎಷ್ಟು ಬೇಡವೆಂದರೂ 500 ರೂಪಾಯಿಗಳನ್ನು ಬಹುಮಾನದ ರೂಪದಲ್ಲಿ ಕೊಟ್ಟಿದ್ದರು.

ಶಾಂತರಸರು ಹುಟ್ಟುಹಾಕಿದ ಗಜಲ್ ಪರಂಪರೆ ಇಂದು ಕನ್ನಡ ನಾಡಿನಲ್ಲಿ ಬಹುದೊಡ್ಡ ಪರಂಪರೆಯಾಗಿ ಬೆಳೆದಿದೆ. ಕನ್ನಡ ನಾಡಿನಲ್ಲಿ ಸುಮಾರು 2000 ಗಜಲ್ ಕವಿಗಳು ಇರುವ ಅಂದಾಜಿದೆ. ಅವರು ರಚಿಸುವ ಗಜಲ್‌ಗಳು ಶಾಂತರಸರಿಗೆ ಸಲ್ಲುವ ನುಡಿನಮನ. ಅಕ್ಕ ಮುಕ್ತಾಯಕ್ಕ, ಗೆಳೆಯ ಚಿದಾನಂದ ಸಾಲಿ, ಅಣ್ಣ ಹೊನ್ನಕಲ್, ಅಲ್ಲಾಗಿರಿರಾಜ, ಮಹಿಪಾಲರೆಡ್ಡಿ, ಮಲ್ಲಿನಾಥ, ಮುಂತಾದವರು ಗಜಲ್ ರಥವನ್ನು ಸಮರ್ಥವಾಗಿ ಎಳೆಯುತ್ತಿದ್ದಾರೆ; ಆ ಮೂಲಕ ಶಾಂತರಸರ ಪರಂಪರೆ ಮುಂದುವರೆದಿದೆ.

ಶಾಂತರಸರು ಬರೆದ ಕೆಲವು ಗಜಲ್‌ಗಳನ್ನು ರಾಗ ಸಂಯೋಜನೆ ಮಾಡುವ ಕೆಲಸ ಮದ್ರಾಸಿನ ಸುರೇಶ್ ನೇತೃತ್ವದಲ್ಲಿ ಆರಂಭವಾಗಿ, ಸಂಗೀತ ನಿರ್ದೇಶಕ ಎಂ.ಎಂ. ಕೀರವಾಣಿ ಅವರನ್ನೊಳಗೊಂಡ ತಂಡ ಗಜಲ್‌ಗಳನ್ನು ಅದ್ಭುತವಾಗಿ ಹಾಡಿತು. ಅದರಲ್ಲಿ ಸ್ವತಃ ಕೀರವಾಣಿ ಹಾಡಿದ 'ಬಂದವರೊಂದು ದಿನ ಮರಳಿ ಹೋಗಲೇಬೇಕಲ್ಲ' ಎನ್ನುವ ರಚನೆ, ಗಜಲ್ ಲೋಕದ ರಾಷ್ಟ್ರಗೀತೆಯಂತೆಯೇ ಪ್ರಸಿದ್ಧವಾಯಿತು.

ನಾನು ಬಿ.ಎಸ್ಸಿ. ಕೃಷಿ ಓದುವಾಗಿನ ಘಟನೆಯೊಂದು ನೆನಪಿಗೆ ಬರುತ್ತಿದೆ. ಕೃಷಿ ವಿದ್ಯಾರ್ಥಿಗಳ ಸಂಘಕ್ಕೆ ನಾನು ಅಧ್ಯಕ್ಷನಾಗಿದ್ದೆ. ಆ ಸಂಘ ಶಾಂತರಸರಿಂದ ಉದ್ಘಾಟನೆಯಾಗಬೇಕು ಎನ್ನುವುದು ನನ್ನಾಸೆ. ಅವರನ್ನು ಹೋಗಿ ಕೇಳಿದಾಕ್ಷಣ ಅವರು, 'ನಾನು ಬೇಡ. ರಾಯಚೂರಿನ ಒಬ್ಬ ಹುಡುಗ ಆಂಧ್ರದ ಸಿನಿಮಾಲೋಕದಲ್ಲಿ ಕಮಾಲ್ ಮಾಡುತ್ತಿದ್ದಾನೆ. ಅವನಿಗೆ ಫೋನ್ ಮಾಡಿ ಹೇಳುವೆ. ಅವನಿಂದ ಉದ್ಘಾಟನೆ ಆಗಲಿ' ಎಂದು ಎಂ.ಎಂ. ಕೀರವಾಣಿಯವರಿಗೆ ಫೋನ್ ಮಾಡಿ, ತಿಳಿಸಿದರು. ಕೀರವಾಣಿ ತಮ್ಮ ತಂಡದೊಂದಿಗೆ ಬಂದು ಉದ್ಘಾಟಿಸಿದರು. ನಾಲ್ಕು ತಾಸುಗಳ ವಚನಗಾಯನವನ್ನು ನೀಡಿ, ಒಂದು ನಯಾಪೈಸೆ ತೆಗೆದುಕೊಳ್ಳದೆ ತಮ್ಮ ಖರ್ಚಿನಲ್ಲಿ ಬಂದು ಹಾಡಿ ಹೋದರು. ಇದು ಶಾಂತರಸರ ಶಕ್ತಿಯಾಗಿತ್ತು.

ಹೈದ್ರಾಬಾದ್ ಕರ್ನಾಟಕ ವಿಮೋಚನೆ ಚಳವಳಿಯಲ್ಲಿ, ರಜಾಕಾರರ ವಿರುದ್ಧ ನೇರಾನೇರ